## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಎಸ್. ನಿರಂಜನ, ಹಿಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ವಿಚಾರಣೆ- ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ-ಆದೇಶ.

ಓದಲಾಗಿದೆ.

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅರೆ ಪತ್ರ ಸಂಖ್ಯೆ: Compt/uplok/GIB-94/2008/ARE-5, Dated:19.8.2017.
2. ಮಾನ್ಯ ಉಪ ಲೋಕಾಯುಕ್ತ-। ರವರ ಲೋಕಾಯುಕ್ತ ಕಾಯ್ದೆ ಕಲಂ12(3)ರನ್ವಯ ವರದಿ ಸಂಖ್ಯೆ: Compt/uplok/GIB-94/2008/ARE-5, Dated:17.8.2017.

ಪ್ರಸ್ತಾವನೆ:-

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರುರವರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:19.8.2017 ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪಲೋಕಾಯುಕ್ತ-।ರವರ ದಿನಾಂಕ:17.8.2017 ರ ಲೋಕಾಯುಕ್ತ ಕಾಯ್ದೆ ಕಲಂ 12(3) ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ ಸರ್ಕಾರಕ್ಕೆ ಕಳುಹಿಸಿ, ಮಾನ್ಯ ಉಪಲೋಕಾಯುಕ್ತ-।ರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-। ರವರ ವರದಿ ಹಾಗೂ ಸದರಿ ವರದಿಗೆ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶ್ರೀ ಸುಧೀಂದ್ರ ಜಾಗೀರ್‌ದಾರ್, ರಾಯಚೂರು ಇವರು 19.3.2008 ರಂದು ಶ್ರೀ ಎಸ್. ನಿರಂಜನ, ಕಿರಿಯ ಇಂಜಿನಿಯರ್ ಮತ್ತು ಇತರೆ ನಾಲ್ಕು ಮಂದಿ ಅಧಿಕಾರಿ/ನೌಕರರ ವಿರುದ್ಧ ಸಲ್ಲಿಸಿರುವ ದೂರಿನಲ್ಲಿ ಪ್ರತಿವಾದಿಗಳು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಸಹಕರಿಸುತ್ತಿರುವುದಿಲ್ಲವೆಂದು, ಬಲ್ಲ ಆದಾಯ ಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿರುತ್ತಾರೆಂದು, ಬೋಗಸ್ ಬಿಲ್‌ಗಳನ್ನು ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಆರೋಪಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರು ಸದರಿ ದೂರಿನ ಕುರಿತು ತನಿಖೆ ಕೈಗೊಂಡಿದ್ದು, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದಿಂದ ತನಿಖೆ ನಡೆಸಿ ವರದಿ ಪಡೆದಿದ್ದು ತನಿಖಾ ವರದಿಯಲ್ಲಿ ಈ ಕೆಳಕಂಡ ಎರಡು ಅಂಶಗಳ ಕಂಡು ಬರುತ್ತವೆ ಎಂದು ತಿಳಿಸಲಾಗಿದೆ.

1. ಆಹಾರ ಸಾಮಗ್ರಿಗಳ ದುರುಪಯೋಗ ಆರೋಪಗಳಿಗೆ ಸಂಬಂಧಿಸಿದಂತೆ ಮಹಾಲೇಖಪಾಲರು ಸಲ್ಲಿಸಿದ್ದ ವರದಿಯನ್ನು ಅನುಸರಿಸಿ, ಶ್ರೀ ಎಸ್.ನಿರಂಜನ್, ಕಿರಿಯ ಇಂಜಿನಿಯರ್ ಇವರ ವಿರುದ್ಧ ಇಲಾಖೆ ವಿಚಾರಣೆ ನಡೆದಿದ್ದು, ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ಅವರಿಂದ ಉಂಟಾಗಿರುವ ನಷ್ಟದ ಪ್ರಮಾಣವನ್ನು ವಸೂಲಿ ಮಾಡಲು ಹಾಗೂ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವ ದಂಡನೆ ವಿಧಿಸಲಾಗಿದ್ದು, ಸದರಿ ದಂಡನೆಯನ್ನು ನೌಕರರು ಮಾನ್ಯ ಕೆ.ಎ.ಟಿಯಲ್ಲಿ ಅರ್ಜಿ ಸಲ್ಲಿಸಿ, ತಡೆಯಾಜ್ಞೆ ಪಡೆದಿರುತ್ತಾರೆಂದು,

2. ಮಹಾಲೇಖಪಾಲರ ಆಕ್ಷೇಪಣೆಯಲ್ಲಿ ಶ್ರೀ ಎಸ್.ನಿರಂಜನ, ಕಿ.ಇಂ ಇವರ ಇವರ ವಿರುದ್ಧ ರೂ. 5.56 ಲಕ್ಷ ರೂಗಳ ಎಂ.ಎ.ಎಸ್. ಆಕೌಂಟ್ ಸಲ್ಲಿಸದೇ ಅವ್ಯವಹಾರ ಎಸಗಿರುವುದು ಕಂಡು ಬರುತ್ತದೆ ಎಂದು ತಿಳಿಸಲಾಗಿದೆ.

ಮಾನ್ಯ ಉಪಲೋಕಾಯುಕ್ತರು ಎಲ್ಲಾ 5 ಅಧಿಕಾರಿ/ನೌಕರರಿಗೆ ನೋಟಿಸ್ ಜಾರಿ ಮಾಡಿ ವಿವರಣೆ ಪಡೆದಿರುವುದು ಕಂಡು ಬರುತ್ತದೆ. ಶ್ರೀ ಎಸ್.ನಿರಂಜನ, ಸಲ್ಲಿಸಿರುವ ವಿವರಣೆಯಲ್ಲಿ ತಮ್ಮ ವಿರುದ್ಧ ಈಗಾಗಲೇ ಇಲಾಖೆ ವಿಚಾರಣೆಯನ್ನು ಜರುಗಿಸಿ. ದಂಡನೆ ವಿಧಿಸಲಾಗಿರುತ್ತದೆಯೆಂದು, ಸದರಿ ದಂಡನೆಯನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:4931/2010 ನಲ್ಲಿ ಸಲ್ಲಿಸಿ, ತಡೆಯಾಜ್ಞೆ ಪಡೆಯಲಾಗಿದ್ದು, ಒಂದೇ ಆರೋಪಗಳಿಗೆ ಸಂಬಂಧಿಸಿದಂತೆ ಎರಡು ಇಲಾಖೆ ವಿಚಾರಣೆ ನಡೆಸಲು ಅವಕಾಶ ಇರುವುದಿಲ್ಲವೆಂಬ ಬಗ್ಗೆ ತಿಳಿಸಿ, ಪ್ರಕರಣವನ್ನು ಮುಕ್ತಾಯ ಮಾಡಲು ಕೋರಿರುತ್ತಾರೆಂದು ಶ್ರೀ ಎಸ್. ನಿರಂಜನ ಇವರು ಸಲ್ಲಿಸಿರುವ ವಿವರಣೆಯು ಆರೋಪಗಳನ್ನು ಕೈ ಬಿಡಲು ಸಮಾಧಾನಕರವಾಗಿರುವುದಿಲ್ಲವೆಂದು ತಿಳಿಸಿ. ಲೋಕೋಪಯೋಗಿ ಇಲಾಖೆಯು ಶ್ರೀ ಎಸ್.ನಿರಂಜನ ಇವರ ವಿರುದ್ಧ 330 ಕ್ವಿಂಟಾಲ್ ಅಕ್ಕಿ ದುರುಪಯೋಗದ ಕುರಿತು ಇಲಾಖೆ ವಿಚಾರಣೆ ಕೈಗೊಂಡು ಹಣ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಹಾಗೂ ವೇತನ ಬಡ್ತಿ ತಡೆಯಿಡಿಯುವ ದಂಡನೆ ವಿಧಿಸಿದ್ದು, ಅದರೆ 5.56 ಲಕ್ಷ ರೂ.ಗಳ ಎಂ.ಎ.ಎಸ್. ಲೆಕ್ಕ ಸಲ್ಲಿಕೆಯಲ್ಲಿನ ಅಕ್ರಮಗಳ ಕುರಿತು ಇಲಾಖೆ ವಿಚಾರಣೆ ನಡೆಸಿರುವುದಿಲ್ಲವೆಂದು ತಿಳಿಸಿ, ಶ್ರೀ ಎಸ್.ನಿರಂಜನ ಇವರ ವಿರುದ್ಧ ವಿವರವಾದ ಇಲಾಖೆ ವಿಚಾರಣೆ ನಡೆಸಲು ತಮ್ಮ ಸಂಸ್ಥೆಗೆ ವಹಿಸುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ಕಲಂ 12(3) ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ಎಸ್. ನಿರಂಜನ ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರಾಯಚೂರು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 5.56 ಲಕ್ಷ ರೂ.ಗಳ ಸಾಮಗ್ರಿಗಳಿಗೆ ಎಂ.ಎ.ಎಸ್. ಲೆಕ್ಕ ಸಲ್ಲಿಸದೇ ಕರ್ತವ್ಯ ಲೋಪವೆಸಗಿರುವುದು ಹಾಗೂ ಸದರಿ ಮೊತ್ತದ ಹಣ ದುರುಪಯೋಗಪಡಿಸಿಕೊಂಡಿರುವುದು ಮಾನ್ಯ ಉಪಲೋಕಾಯುಕ್ತರ ವರದಿಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆರೋಪಿತ ಅಧಿಕಾರಿಯು ಸರ್ಕಾರಿ ನೌಕರರಾಗಿದ್ದು, ಅವರ ಕಾರ್ಯನಿರ್ವಾಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಈ ರೀತಿಯಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) ನ್ನು ಉಲ್ಲಂಘಿಸಿರುವುದು ಕಂಡು ಬರುವುದರಿಂದ ಸದರಿಯವರ ವಿರುದ್ಧ ವಿವರವಾದ ಇಲಾಖೆ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ- 1ರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**<u>ಆದೇಶ ಸಂಖ್ಯೆ:ಗ್ರಾಅಪ 93 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:14.9.2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಸ್. ನಿರಂಜನ, ಹಿಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957ರ ನಿಯಮ-11 ರಂತೆ ನಡೆಸಲು ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 14/09/201
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

3. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಅಪರ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ. ಬೆಂಗಳೂರು.

6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
9. ಆಯುಕ್ತರು, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
11. ಶ್ರೀ ಎಸ್.ನಿರಂಜನ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಬಳ್ಳಾಪುರ
12. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
13. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
14. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.